ಕೃತಿಗಳನ್ನು ಬರೆದ ಕವಿ ಯಾವನು? ದೋಷಗಳಿದ್ದಲ್ಲಿ ಅವನ್ನು ತೋರಿಸುವುದು ಶಿಕ್ಷಕನ ಕರ್ತವ್ಯವಲ್ಲವೆ? ಶಿಕ್ಷಕನು ಹೊಗಳುಭಟ್ಟನಾಗಬೇಕೆ? ದೋಷಗಳನ್ನು ತೋರಿಸಿ ಅಂತಹ ದೋಷಗಳನ್ನು ಮಾಡಬೇಡಿರೆಂದು ವಿದ್ಯಾರ್ಥಿಗಳಿಗೆ ಶಿಕ್ಷಕನು ಹೇಳದಿದ್ದರೆ ಶಿಕ್ಷಕನು ತನ್ನ ಕರ್ತವ್ಯದಿಂದ ಚ್ಯುತನಾಗುವುದಿಲ್ಲವೆ? ಈ ವಿದ್ಯಾರ್ಥಿಗಳ ಹಿಂದೆ ಹಿರಿಯರೂ ಇದ್ದಂತೆ ವಾರ್ತೆಯಿದೆ! ಇದು ನಿಜವಾಗಿಯೂ ಕನ್ನಡದ ದುರ್ಭಾಗ್ಯವು! ಶ್ರೀಹರಿ, ನನ್ನ ಅಂತಃಕರಣವನ್ನು ಬಲ್ಲೆ. ನನ್ನ ಮಾನಾಪಮಾನವು ನಿನ್ನದಯ್ಯ!

**24-11-41ರಾತ್ರಿ 8.42**

ಮೊನ್ನೆ ಬಲು ದಣಿವು. ನಿನ್ನೆಯೂ ದಣಿವು. ರಾತ್ರಿ ಬೆವರು. ಚಡಪಡಿಕೆ. ನಿನ್ನೆ ನಿದ್ದೆ ತಕ್ಕಮಟ್ಟಿಗೆ ಆಯ್ತು.

ಮನೆಯ ಕೆಲಸವು ಮತ್ತೆ ನಿಂತಿದೆ. ಚೌಕಟ್ಟುಗಳಿಲ್ಲ. ಗೋಠೆಯವರಲ್ಲಿ ಬೇಕಷ್ಟು ಆಸ್ಥೆ ಇಲ್ಲವೊ? ಶುಕ್ರವಾರ ಬರುವೆನೆಂದು ಊರಿಗೆ ಹೋದವರು ಇನ್ನೂ ಬರಲಿಲ್ಲ. ಮನೆಗೆ ಕಲ್ಲುಗಳ ಪೂರೈಕೆಯೂ ಇಲ್ಲ, ವ್ಯವಸ್ಥೆ ಇಲ್ಲ, ಯೋಜನೆ ಇಲ್ಲ, ನನ್ನೊಡನೆ ಅವರು ಹೀಗೆ ನಡೆದುಕೊಳ್ಳುವರೆಂದು ನಾನು ಬಗೆದಿರಲಿಲ್ಲ!

ಇಟ್ಟಿಗೆಗಳಿಗೋಸುಗ ಆವಿಗೆಯನ್ನು ಮಾಡಲು ಅಪ್ಪಣೆಯ ಸಲುವಾಗಿ ಮ್ಯುನಿಸಿಪಾಲಿಟಿಗೆ ಇಂದು ಅರ್ಜಿಯನ್ನು ಬರದುಕೊಂಡಿದ್ದೇನೆ. ಎಂದು ಮತ್ತು ಹೇಗೆ ಉತ್ತರವು ದೊರೆವುದೊ?

ದೇವಾ, ಕೃಪೆದೋರು; ಸತ್ಯದ ನಲ್ಲುಣಿಸನ್ನು ನನಗಿತ್ತು ನನ್ನನ್ನು ಬಲಶಾಲಿಯಾಗಿ ಮಾಡುವುದಯ್ಯಾ! ದೇಹಬಲ, ಬುದ್ಧಿಬಲ, ಮನೋಬಲ, ಆತ್ಮಬಲ ಇವೆಲ್ಲಕ್ಕೂ ನೀನೆ ಆಶ್ರಯವು, ನಿನ್ನನ್ನು ಮೊರೆ ಹೊಕ್ಕಿಹೆನು, ಈಶನೆ!

**25-11-41 ರಾತ್ರಿ 9.45**

ಲಿಂಗವಂತರು ನನ್ನ ವಿರುದ್ಧವಾಗಿ ಹುಯ್ಲನ್ನು ಎಬ್ಬಿಸಿರುವರು. ಮಿಥ್ಯಾಗ್ರಹವು, ಎಷ್ಟೊಂದು ಅವಿವೇಕಕ್ಕೆ ಕೈಯಿಕ್ಕುವುದು! ದುರ್ದೈವವು!

ಸಾಯಂಕಾಲ ಶ್ರೀಮತಿ ಶಕುಂತಲಾಬಾಯಿಯ ಮನೆಗೆ ಹೋಗಿ ಅವರನ್ನು ಕಂಡೆನು. ಬಂಧುಪ್ರೇಮದ ಶುದ್ಧ ವಾತಾವರಣದಲ್ಲಿ ಒಂದು ಒಂದೂವರೆ ಗಂಟೆಯನ್ನು ಕಳೆದೆವು. ಮೊನ್ನೆ ರಚಿಸಿದ ಪದ್ಯವನ್ನು ಹಾಡಿದರು. ಎಷ್ಟು ಮಧುರವದು! ಬೇರೆ ಹಾಡುಗಳನ್ನೂ ಹಾಡಿದರು. ಸಂಗೀತದ ಪ್ರಭಾವವು ವಿಲಕ್ಷಣವಾದುದು. ಮನಸ್ಸಿನ ಅಶಾಂತಿಯನ್ನು, ನೋವನ್ನು ಕಳೆವ ದಿವ್ಯೌಷಧಿಯದು.

ಇದೇ ಈಗ ಗೋಠೆ ಕೇಶವರಾಯರನ್ನು ಕಂಡು ಬಂದೆನು. ಕೆಲಸವನ್ನು ವೇಗದಿಂದ ನಡೆಯಿಸುವೆನೆಂದು ಹೇಳಿದರು.

**26-11-41 ರಾತ್ರಿ 10.10**

ನಿನ್ನೆ ಹೊಸ ಅಡಿಗೆಯವರು ಬಂದಿರುವರು. ಕೆಲಸವನ್ನು ಬಲ್ಲಳು. ವೈಷ್ಣವ ಪದ್ಧತಿಯನ್ನು ಸರಿಯಾಗಿ ಅರಿತವಳು. ಒಳ್ಳೆಯವಳಾಗಿ ಇರಲಿ.

ಬಾವಿಯ ಕೆಲಸವು ಸಾಗಿದೆ. ಮನೆಯ ಕೆಲಸವು ನಿನ್ನಿನಿಂದ ಮತ್ತೆ ನಿಂತಿದೆ. ಇದು ನನ್ನ ಮನೋವ್ಯಥೆಗೆ ಕಾರಣವಾಗಿದೆ. ಪದ್ಧತಿ, ಯೋಜನೆಗಳನ್ನು ಬಿಟ್ಟು ನಡೆದಿರುವರು ಗೋಠೆ.

'ಶಾಕುಂತಲ' ಸಿನೆಮಾ ಚಿತ್ರಪಟವನ್ನು ಇದೇ ನೋಡಿಬಂದೆನು. ತಕ್ಕಮಟ್ಟಿಗೆ ಚೆನ್ನಾಗಿ ಇದೆ. ನ್ಯೂನಾತಿರಿಕ್ತಗಳು ಬಹಳವಾಗಿವೆ. ಶಕುಂತಲೆಯ ಪಾತ್ರವನ್ನು ಚೆನ್ನಾಗಿ ಮಾಡಿರುವಳು ನಟಿ. ದುಷ್ಯಂತನ ಪಾತ್ರವನ್ನು ವಹಿಸಿದವನು ಆ ಪಾತ್ರಕ್ಕೆ ಯೋಗ್ಯನಲ್ಲವೆಂದು ನನ್ನ ಅಭಿಪ್ರಾಯ. ಒಟ್ಟಿನಲ್ಲಿ ಸರಿಯಾಗಿದೆ.

**29-11-41 ರಾತ್ರಿ 9.4**

ಮನೆಯ ಕಟ್ಟಡದ ಕೆಲಸವು ನಿಂತಲ್ಲಿಯೆ ನಿಂತುದನ್ನು ಕಂಡು ವ್ಯಥೆಯಾಯ್ತು. ಗೋಠೆ ಕೇಶವ ರಾಯರಿಗೆ ಪತ್ರವನ್ನು ಬರೆದು ಭಾಗೀರಥಿಯ ಕೈಯಲ್ಲಿ ಕೊಟ್ಟು ಮುಟ್ಟಿಸಿದೆನು. ನನ್ನ ಮನಃಸ್ಥಿತಿಯನ್ನು ಅವರಿಗೆ ತಿಳಿಸುವುದು ನನ್ನ ಕರ್ತವ್ಯವಾಯ್ತು. ಪತ್ರದ ಪರಿಣಾಮವಾಗಿ ಇಂದು ಕೆಲಸವು ಮತ್ತೆ ಪ್ರಾರಂಭವಾಗಿದೆ. ಕೇಶವರಾಯರಿಗೂ ಮಹತ್ವದ ಅರಿವಾಯ್ತು.

ಶ್ರೀಗೀತಾ ಜಯಂತಿ ಇಂದು. ಹಾದಿಗಾಣದ ಜಗತ್ತಿನ ಜನಕ್ಕೆ ಇದುವೆ ಹಾದಿಯೆಂದು ಅಸಂದಿಗ್ಧವಾಗಿ ಹೇಳುವ ಮಹಾಗ್ರಂಥವು ಶ್ರೀಗೀತೆ! ಗಾತ್ರದಲ್ಲಿ ಇದು ಚಿಕ್ಕದು, ಮಹತ್ವಕ್ಕೆ ಮಿತಿಯಿಲ್ಲ, ಕರ್ತವ್ಯಮೂಢರಿಗೆ